**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ ಚನ್ನಪಟ್ಟಣ.**

**ಸಿ.ಸಿ. ಸಂಖ್ಯೆ: 291/2023**

ಚಾಸಾ: 1 ಪ್ರಾಸಾ:1

| | | |
|---|---|---|
| ಹೆಸರು | : | ಬಸವರಾಜು ಸಿ |
| ಗಂಡನ/ತಂದೆಯ ಹೆಸರು | : | ಚಂದ್ರಪ್ಪ |
| ವಯಸ್ಸು | : | 39ವರ್ಷ |
| ಉದ್ಯೋಗ | : | ಪಿಎಸ್ಐ<br>ಸಂಚಾರ ಪೋಲಿಸ್ ಠಾಣೆ, ಚನ್ನಪಟ್ಟಣ |
| ವಾಸ | : | ಚನ್ನಪಟ್ಟಣ |

**ದಿನಾಂಕ 13.03.2026 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ: ಮಾನ್ಯ ಎಪಿಪಿ ಯವರಿಂದ:**

ನಾನು ಏಪ್ರಿಲ್ 2022 ರಿಂದ ಏಪ್ರಿಲ್ 2025 ರವರೆಗೆ ಅಕ್ಕೂರು ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 31.03.2023 ರಂದು ಮುಂಬರುವ ವಿಧಾನಸಭಾ ಚುನಾವಣಾ ಪ್ರಯುಕ್ತ ವಿಶೇಷ ರಾತ್ರಿ ಗಸ್ತು ಕರ್ತವ್ಯಕ್ಕೆ ತೆರಳಿದ್ದು, ಠಾಣಾ ಸರಹದ್ದಿನ ಹಾರೋಕೊಪ್ಪ, ನುಣ್ಣೂರು, ನೆರಳೂರು ಗ್ರಾಮದ ಕಡೆ ಗಸ್ತು ಮಾಡಿಕೊಂಡು ನಂತರ ಠಾಣಾ ಸರಹದ್ದಿನಲ್ಲಿರುವ ಇಗ್ಗಲೂರು ಗ್ರಾಮದ ಚುನಾವಣಾ ಚೆಕ್ ಪೋಸ್ಟ್ ಬಳಿ ಅನುಮಾನಸ್ಪದ ವ್ಯಕ್ತಿಗಳನ್ನು ಮತ್ತು ವಾಹನವನ್ನು ತಪಾಸಣೆ ಮಾಡಲು ನಾನು ಸಿಬ್ಬಂದಿಯನ್ನು ನೇಮಿಸಿದ್ದು, ಸದರಿ ಸಿಬ್ಬಂದಿಗಳು ಪರಿಶೀಲಿಸಲು ಚೆಕ್ ಪೋಸ್ಟ್ ಬಳಿ ತೆರಳಿದಾಗ ಬೆಳಗಿನ ಜಾವ 1.00 ಗಂಟೆಯ ಸಮಯದಲ್ಲಿ ಅಂದರೆ ದಿ: 01.04.2023 ರಂದು ಚೆಕ್ ಪೋಸ್ಟ್ ಬಳಿ ಹೋಗಿದ್ದು, ಅಲ್ಲಿ ಸಿಬ್ಬಂದಿಯೊಂದಿಗೆ ನಾನು ಸಹ ವಾಹನ ತಪಾಸಣೆ ಮಾಡಿದಾಗ ಸುಮಾರು 1.05 ಗಂಟೆಯ ಸಮಯದಲ್ಲಿ ಮದ್ದೂರು ಕಡೆಯಿಂದ ಒಬ್ಬ ವ್ಯಕ್ತಿ ಟಿವಿಎಸ್ ದ್ವಿಚಕ್ರ ಮೋಟಾರ್ ವಾಹನವನ್ನು ಚಲಾವಣೆ ಮಾಡಿಕೊಂಡು ಬರುತ್ತಿದ್ದು, ನಾವು ನಿಲ್ಲಿಸುವಂತೆ ಸೂಚಿಸಿದಾಗ ಸದರಿ ವ್ಯಕ್ತಿ

ನಿಲ್ಲಿಸದೇ ಮುಂದೆ ಹೋಗಲು ಪ್ರಯತ್ನಿಸಿರುತ್ತಾರೆ ಆಗ ನಾವು ಸದರಿ ವಾಹನವನ್ನು ತಡೆದು ನಿಲ್ಲಿಸಿ ಪರಿಶೀಲಿಸಿದಾಗ ಸದರಿ ದ್ವಿಚಕ್ರ ವಾಹನದ ಸಂಖ್ಯೆ ಕೆಎ-51-ಎಸಿ 2809 ರ ಸವಾರನನ್ನು ವಿಚಾರ ಮಾಡಿದಾಗ ತನ್ನ ಬಳಿ ಹಣ ಇರುವುದಾಗಿ ತಿಳಿಸಿದ್ದು ಹಣವನ್ನು ಮನೆಗೆ ತೆಗೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿರುತ್ತಾನೆ. ಸದರಿ ಸಮಯದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದರಿಂದ ಸದರಿ ವ್ಯಕ್ತಿ ನಿರ್ದಿಷ್ಟ ದಾಖಲೆಗಳನ್ನು ಹಾಜರುಪಡಿಸದ ಕಾರಣ ಹಣವನ್ನು ತೆಗೆದುಕೊಂಡು ಹೋಗಲು ನಿರ್ಬಂದ ಇರುವುದರಿಂದ ನಾನು ಪಂಚರಾದ ಚಾಸಾ-5 ಮತ್ತು 6 ರವರನ್ನು ಬರಮಾಡಿಕೊಂಡು ಪಂಚರ ಸಮಕ್ಷಮದಲ್ಲಿ ಆ ವ್ಯಕ್ತಿಯ ಹೆಸರು ಮತ್ತು ವಿಳಾಸ ಕೇಳಲಾಗಿ ಅವರ ಹೆಸರು ಶೇಖರ್ ಬಿನ್ ಕೃಷ್ಣ, ಬಾರ್ ಕ್ಯಾಶ್ ಯರ್ ಆಗಿ ಕೆಲಸ ಮಾಡುತ್ತಿದ್ದು, ಅಗರಲಿಂಗನ ದೊಡ್ಡಿ ಗ್ರಾಮ, ಮದ್ದೂರು ತಾಲ್ಲೂಕು ಎಂದು ತಿಳಿಸಿದ ಮೇರೆಗೆ ಆತನ ಬಳಿ ಇದ್ದ ಒಂದು ಪ್ಲಾಸ್ಟಿಕ್ ಕವರ್ ತೆಗೆದು ನೋಡಲಾಗಿ 500 ಮುಖಬೆಲೆಯ 146 ನೋಟುಗಳು, 200 ಮುಖಬೆಲೆಯ 80 ನೋಟುಗಳು, 100 ಮುಖಬೆಲೆಯ 200 ನೋಟುಗಳು ಒಟ್ಟು 1,09000/-ಹಣ ಇತ್ತು. ಸದರಿ ಹಣದ ಬಗ್ಗೆ ದಾಖಲಾತಿಯನ್ನು ಕೇಳಲಾಗಿ ಸದರಿ ಹಣದ ಬಗ್ಗೆ ಯಾವುದೇ ದಾಖಲಾತಿ ಇಲ್ಲವೆಂದು ತಿಳಿಸಿರುತ್ತಾರೆ. ತನ್ನ ಬಳಿ ಇದ್ದ ಹಣವನ್ನು ಯಾರಿದಂದ ತೆಗೆದುಕೊಂಡು ಬಂದಿರುತ್ತೇನೆ ಮತ್ತು ಯಾರಿಗೆ ಕೊಡಲು ಹೋಗುತ್ತಿದ್ದೇಂದು ಸೂಕ್ತ ಸಮಜಾಯಿಸಿ ನೀಡಿರುವುದಿಲ್ಲ. 2023 ರ ವಿಧಾನಸಭಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಈ ಸಮಯದಲ್ಲಿ ಚುನಾವಣಾ ಆಮಿಷವನ್ನು ಒಡ್ಡುವುದರಿಂದ ಮತದಾರರ ಮೇಲೆ ಪ್ರಭಾವ ಬೀರುವಲ್ಲಿ ತಡೆಯಲು ಚೆಕ್ ಪೋಸ್ಟ್ ಅನ್ನು ರಚಿಸಿರುತ್ತೇವೆ. ದೊರೆತ ಹಣದ ಮೂಲವನ್ನು ಪತ್ತೆ ಹಚ್ಚಬೇಕಾಗಿರುವುದರಿಂದ ಸದರಿ ಹಣ ಯಾರಿಗೆ ಸಂಬಂದಪಟ್ಟಿದಾಗಿದೆ ಎಂದು ತಿಳಿದುಕೊಂಡು ಕಾನೂನು ಕ್ರಮ ಕೈಗೊಳ್ಳಬೇಕಾಗಿದ್ದರಿಂದ ಸದರಿ ಪಂಚರ ಸಮಕ್ಷಮ ಅಂದರೆ ಚಾಸಾ5 ಮತ್ತು 6 ರವರ ಸಮಕ್ಷಮ 1,09000/- ಹಣವನ್ನು ಬೆಳಗಿನ ಜಾವ 1.10-1.40 ಗಂಟೆಯವರೆಗೆ ಪಂಚನಾಮೆಯ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಅಮಾನತ್ತು ಪಡಿಸಿದ ನಗದು ಹಣಮತ್ತು ವ್ಯಕ್ತಿಯನ್ನು ಬೆಳಗಿನ ಜಾವ 2.00 ಗಂಟೆಗೆ ಠಾಣೆಗೆ ಕರೆದುಕೊಂಡು ಬಂದು ಪ್ರಕರಣ ದಾಖಲಿಸಿರುತ್ತೇನೆ. ನಂತರ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ನಮ್ಮ ಮೇಲಾಧಿಕಾರಿಯವರಿಗೆ

ನಿವೇದಿಸಿಕೊಂಡಿರುತ್ತೇನೆ. ಅಮಾನತ್ತು ಪಡಿಸಿದ ನಗದನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 43/2023 ರಲ್ಲಿ ನೊಂದಾಯಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಸಾಕ್ಷಿಯು ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.ಸಾಕ್ಷಿಯು ದೂರನ್ನು ನೋಡುತ್ತಿದ್ದು ಅದನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಪ್ರಥಮ ವರ್ತಮಾನ ವರದಿಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಅದೇದಿನ ತನಿಖೆಯನ್ನು ಮುಂದುವರೆಸಿ ಆರೋಪಿಗೆ ದಸ್ತಗಿರಿ ಕ್ರಮ ಅನುಸರಿಸಿ ಸೂಕ್ತ ಜಾಮೀನಿನೊಂದಿಗೆ ಬಿಡುಗಡೆ ಮಾಡಿರುತ್ತೇನೆ. ಚಾಸಾ 2 ರಿಂದ ಚಾಸಾ-6 ರವರ ಹೇಳಿಕೆಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ07.04.2023 ರಂದು ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಮಾನ್ಯ ಎಪಿಪಿರವರು ಮುಂದುವರೆದ ಮುಖ್ಯವಿಚಾರಣೆಗಾಗಿ ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**